
ದಾಟಲು ಯತ್ನಿಸುವುದು ಅನಾಗರಿಕತೆಯ ಪರಾಕಾಷ್ಠೆ. ಸರತಿ ಇರೋದೇ ಅದನ್ನು ಮುರಿಯಲು ಎಂಬ ಇಂಡಿಯಾದ ಧೋರಣೆಯನ್ನೂ, ಇಂಗ್ಲಿಷರ ಧೋರಣೆಯನ್ನೂ ತೂಕ ಹಾಕಲಾರಂಭಿಸಿದೆ. ಇಲ್ಲಿ ಸರತಿಯಿರುವುದು ಯಾವುದೇ ಇನ್‌ಫ್ಲುಯೆನ್ಸ್ ಇಲ್ಲದ ಸಾಧು-ಸಜ್ಜನರಿಗೆ ಮಾತ್ರ. ಅದು ಇದ್ದವರಿಗೆ, ಏನು ಬೇಕಾದರೂ, ಮನೆ ಬಾಗಿಲಿಗೇ.

ಈ ಸರತಿಯ ಬಗ್ಗೆ ಏಕಿಷ್ಟು ಅನಾದರ, ತಾತ್ಸಾರ, ಆತಂಕ ಎಂದು ಒಂದಿಷ್ಟು ಆತ್ಮಾವಲೋಕನ ಮಾಡಿಕೊಂಡೆ. ನಾವು ಸರತಿಯಲ್ಲಿ ನಿಲ್ಲಬೇಕೆಂದರೆ ಮುಜುಗರ. ಅದೇ, ಬೇರೆಯವರು ನಿಲ್ಲದಿದ್ದರೆ, ಅದು ಅಶಿಸ್ತು. ಇದೇ ಅಲ್ಲವೇ ಜಗತ್ತು.

ಸರತಿ ನಿಲ್ಲುವ ಮನಸ್ಸಿಲ್ಲದೇ ತಪ್ಪಿಸಿಕೊಂಡ ಸಿನಿಮಾಗಳ ಪಟ್ಟಿ ಮಾಡಲು ಯತ್ನಿಸಿದೆ. ಸಿನಿಮಾ ಕ್ಯೂಗಳ ದೇವಸ್ಥಾನದ ವರೆಗೂ ಹೋಗಿ, ಶಿಲ್ಪ ಕಲಾ ವೈಭವ ಸವಿದು, ದೇವಾನುದೇವತೆಗಳ ದರ್ಶನದಿಂದಲೂ ಜಾರಿಕೊಂಡಿದ್ದು ಎಷ್ಟೋ – ನಾನು ಸರತಿಯ ಸರಕಲ್ಲ ಎಂದು ಘೋಷಿಸಿಕೊಂಡು. "ಸಾಲಲ್ಲಿ ಹೋಗುವ ಸ್ವರ್ಗ ಬೇಡವೇ ಬೇಡ" ಎಂದು ಸ್ವರ್ಗೀಯರಾಗಿರುವ ಎಚ್ಚೆನ್ ಆಟೋ ಡ್ರೈವರನಿಗೆ, ವೈಕುಂಠ ಏಕಾದಶಿ ನಿಮಿತ್ತ ಯಾವುದೋ ದೇವಸ್ಥಾನದ ಮುಂದಿದ್ದ ದೊಡ್ಡ ಕ್ಯೂ ತೋರಿಸಿ ಹೇಳಿದ್ದ ಸನ್ನಿವೇಶ ಸ್ಮೃತಿ ಪಟಲದ ಮೇಲೆ ಸಾಲಾಗಿ ಸರಿದು ಹೋಯಿತು.

ಜೀವನದಲ್ಲಿ ಎಷ್ಟೆಲ್ಲಾ ಸಂದರ್ಭದಲ್ಲಿ ಸರತಿಯಲ್ಲಿಯೇ ನಿಂತಿದ್ದೆ. ಸೀಮೆಎಣ್ಣೆಗಾಗಿ ಮಾತ್ರವಲ್ಲ ಕುಡಿಯುವ ನೀರಿಗಾಗಿ ಕಲಬುರ್ಗಿಯಲ್ಲಿ ಪಾಳಿ ಹಚ್ಚಿದ್ದು, ರೇಷನ್ ಶಾಪಿನ ಮುಂದೆ, ಅಕ್ಕಿ-ಸಕ್ಕರೆಗಾಗಿ ಕ್ಯೂ ನಿಂತ ದಿನ, ನಿಲ್ಲುವ ಜನ ನೆನಪಾದರು. ರಿಸರ್ವೇಶನ್ನಿಗೆ ರೈಲ್ವೆ ಸ್ಟೇಷನ್ನಿನಲ್ಲಿ, ಆಸ್ಪತ್ರೆಯಲ್ಲಿ, ತೀರಾ ಈಚೀಚೆಗೆ ಎಟಿಎಮ್ಮುಗಳ ಮುಂದೆ... ಓಹೋ... ಯಾವುದೋ ಸಂಸ್ಥೆಯನ್ನು ಶ್ರೀಮಂತ ಮಾಡಲು ಈಗ ಸರತಿ ನಿಂತಿದ್ದೇವೆ ಎನಿಸಲಾರಂಭಿಸಿತು. ಅಷ್ಟರಲ್ಲಿ ಯಾವುದೋ ಒಬ್ಬ ಪುಣ್ಯಾತ್ಮ ಬಂದು, ರಾತ್ರಿಯೇ ಸುಮಾರು 150ಕ್ಕೂ ಹೆಚ್ಚು ಮಂದಿ ಕ್ಯೂ ನಿಂತಿದ್ದರು ಗೊತ್ತಾ... ಎಂದು ಬುರುಡೆ ಬಿಡಲಾರಂಭಿಸಿದ. ಅವನು ಇದೇ ಶಾಲೆಯ ಬಂಟನೋ ಏಜೆಂಟನೋ ಎಂಬ ಶಂಕೆ ಮೂಡಲಾರಂಭಿಸಿತು. "ಪರವಾಗಿಲ್ಲ ಬಿಡಯ್ಯಾ... ಬೆಳಿಗ್ಗೆ ಆರೂವರೆಗೆ ಬಂದು ಸೊಳ್ಳೆ ಕಚ್ಚಿಸಿಕೊಂಡರೂ, ನನ್ನ ಮುಂದೆ ಈಗ ಮುನ್ನೂರು ಜನ ಇದ್ದಾರೆ. ಸುಖ ನಿದ್ದೆಗಾಗಿ ಬರೀ ನೂರೈವತ್ತು ಸ್ಥಾನಗಳನ್ನು ತ್ಯಾಗ ಮಾಡಿದರೂ ಪರವಾಗಿಲ್ಲ. ಹೆಂಗಿದ್ದರೂ ಅರ್ಜಿ ಕೊಡ್ತಾರಲ್ಲ... ನೂರನೆಯವನಾದ್ರೇನೂ ಮುನ್ನೂರನೇಯವನಾದರೇನು" ಎಂದೆ. ಆತನ ತಲೆಗೆ ಹೋಗಲಿಲ್ಲ. ಯಥಾ ಪ್ರಕಾರ ಕೆಕ್ಕರಿಕೆಯ ಲುಕ್ ಎಸೆದ.

ಅಲ್ಲಿ ನೆರೆದವರದ್ದೆಲ್ಲಾ ವಿವಿಧ ಭಾವಗಳಿದ್ದರೂ, ಸ್ಥಾಯಿ ಭಾವ ಗುರುತಿಸುವುದು ಕಷ್ಟವಾಗಿತ್ತು. ಮಗುವಿಗೆ ಒಳ್ಳೇ ಅವಕಾಶ ದೊರಕುತ್ತದೆ, ಅದರ ಭವಿಷ್ಯ ಭದ್ರವಾಗುತ್ತದೆ ಅಥವಾ ಪ್ರತಿಷ್ಠೆ ಹೆಚ್ಚುತ್ತದೆ ಎಂಬಿತ್ಯಾದಿ ಭಾವಗಳು ಸಂಚಾರವಾಗುತ್ತಿದ್ದವು. ಆದರೆ, ನಮ್ಮೂರಿನ ಹಳ್ಳಿಯ ಪರಿಸ್ಥಿತಿ ಏನೇ ಇದ್ದರೂ, ಮಗು ಶಾಲೆಗೆ ಹೋದರೆ, ತಾತ್ಕಾಲಿಕ ಕಷ್ಟವಾಗಬಹುದಾದರೂ, ಇಡೀ ಕುಟುಂಬಕ್ಕೆ ಮುಂದೊಂದು ದಿನ ಆಸರೆ ಸಿಕ್ಕೀತು ಎಂಬ ನಿರೀಕ್ಷೆಯಿರಬಹುದಾ ಎಂದು ಯೋಚಿಸಲು ಆರಂಭಿಸಿದೆ. ಇದ್ದಿರಬಹುದು ಎಂಬ ಉತ್ತರವೂ ಬಂತು. ಆ ಎಲ್ಲ ಆಶಯಗಳೇನೂ ಬರೀ ಕನಸಿನ ಗೋಪುರಗಳಾ...



ಪಕ್ಕದಲ್ಲಿದ್ದ ಒರಿಸ್ಸಾ ಗೆಳೆಯನಿಗೆ ಮಾತ್ರ ಗಾಬರಿ, ಮತ್ತೊಬ್ಬನ ಮುಖದಲ್ಲೂ ಆತಂಕ ಮಡುಗಟ್ಟೇ ಇತ್ತು. "ಸ್ವಾಮಿ, ಇವರು ಕೊಡ್ತಿರೋದು ಅರ್ಜಿ ಅಷ್ಟೇ. ಸೀಟಲ್ಲ. ಅಲ್ಲದೇ,